ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.karnataka.gov.in

ಮಿಂಚಂಚೆ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್) : ಯು40109ಕೆಎ1999ಎಸ್‌ಜಿ025521
(ಕಂಪನಿಯ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)

**ಸಂಖ್ಯೆ: ಕವಿಪ್ರನಿನಿ/ಬಿ14/526/2019-20** **ದಿನಾಂಕ: 15 MAR 2022**

## : ಸುತ್ತೋಲೆ:

**ವಿಷಯ:** ನಿಗಮದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಕೆಲಸಗಾರರಿಗೆ 2022-2023 ನೇ ಸಾಲಿಗೆ ಪರಿಗಣಿಸಬೇಕಾಗಿರುವ ಕನಿಷ್ಠ ವೇತನದ ಬಗ್ಗೆ.

**ಉಲ್ಲೇಖ:**
1. ಈ ಕಚೇರಿ ಸುತ್ತೋಲೆ: ಕವಿಪ್ರನಿನಿ/ಬಿ14/526/2019-20, ದಿನಾಂಕ: 24.3.2021.
2. ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ರವರ ದಿನಾಂಕ: 19.2.2022 ರ ಆದೇಶ ಸಂಖ್ಯೆ: ಡಿ.ಇ.ಎಸ್/ಎಸ್‌ಐಪಿ/ಪಿಡಬ್ಲ್ಯೂಎಕ್ಸ್/01/2022.

*********

ನಿಗಮದಲ್ಲಿ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಪ್ರಕ್ರಿಯೆಗೊಳಪಡಿಸಿ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಸೇವೆಗಳನ್ನು ಪಡೆಯಲಾಗುತ್ತಿದ್ದು, ಟೆಂಡರ್ ಸಮಯದಲ್ಲಿ ಸದರಿ ಹೊರಗುತ್ತಿಗೆ ಸೇವೆಗಳಿಗೆ ಕಾರ್ಮಿಕ ಇಲಾಖೆಯು ಕಾಲಕಾಲಕ್ಕೆ ಹೊರಡಿಸುವ ಕನಿಷ್ಠ ವೇತನವನ್ನು ಪರಿಗಣಿಸಲು ತಿಳಿಸಲಾಗಿರುತ್ತದೆ. ನಿಗಮದ ಉಲ್ಲೇಖಿತ ಪತ್ರ-1 ರಲ್ಲಿ 2021-2022 ನೇ ಸಾಲಿಗೆ ಕವಿಪ್ರನಿನಿಯ ವಿವಿಧ ಸೇವೆಗಳಿಗೆ ಕಾರ್ಮಿಕ ಇಲಾಖೆಯು ಹೊರಡಿಸಿರುವ ಕನಿಷ್ಠ ವೇತನವನ್ನು ಪರಿಗಣಿಸಲು ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ರವರು 2022 ನೇ ವರ್ಷಕ್ಕೆ ಗ್ರಾಹಕ ಬೆಲೆ ಸೂಚ್ಯಾಂಕ 425 ನ್ನು ಹೆಚ್ಚಿಸಿ ಉಲ್ಲೇಖಿತ ಪತ್ರ-2 ರಲ್ಲಿ ಆದೇಶ ಹೊರಡಿಸಿದೆ. ಅದರಂತೆ ಪ್ರಸ್ತುತ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕವನ್ನು 8398 ಕ್ಕೆ ನಿಗದಿಪಡಿಸಲಾಗಿದೆ.

ಪ್ರಸ್ತುತ ಪಾವತಿಸುತ್ತಿರುವ ವೇತನ ದರಗಳು ಗ್ರಾಹಕ ಸೂಚ್ಯಾಂಕ 7973 ಕ್ಕೆ ಮಾತ್ರ ಲೆಕ್ಕಚಾರ ಮಾಡಲಾಗಿದ್ದು, ದಿನಾಂಕ: 01.04.2022 ರಿಂದ ಜಾರಿಗೆ ಬರುವಂತೆ 425 ಸೂಚ್ಯಾಂಕವನ್ನು ಹೆಚ್ಚಿಸಿರುತ್ತಾರೆ. ಸದರಿ ಹೆಚ್ಚುವರಿ ಸೂಚ್ಯಾಂಕಕ್ಕೆ ಹೆಚ್ಚುವರಿ ವೇತನ ಅಂದರೆ 0.04 ಪೈಸೆಯಿಂದ ಗುಣಿಸಿ 30 ದಿನಗಳಿಗೆ ಲೆಕ್ಕಚಾರ ಮಾಡಿ (ಸೂಚ್ಯಾಂಕ 425 * 0.04 ಪೈಸೆ * 30ದಿನ = 510.00) ಬರುವ ಮೊತ್ತವನ್ನು ಈ ಹಿಂದೆ ಪಾವತಿಸುತ್ತಿದ್ದ ಮಾಸಿಕ ವೇತನ ಜೊತೆ ಸೇರಿಸಿ ಪಾವತಿಸಬೇಕಾಗಿರುತ್ತದೆ. ಪ್ರಸ್ತುತ 2021-22 ನೇ ಸಾಲಿಗೆ ಪರಿಗಣಿಸಲಾಗುತ್ತಿದ್ದ ವೇತನ ಮತ್ತು 2022-23 ನೇ ಸಾಲಿಗೆ ಪರಿಗಣಿಸಬೇಕಾಗಿರುವ/ಪಾವತಿಸಬೇಕಾದ ಕನಿಷ್ಠ ವೇತನ ಈ ಕೆಳಕಂಡಂತೆ ಇರುತ್ತದೆ.

## 1. ವಿದ್ಯುತ್ ಸ್ಥಾವರಗಳಲ್ಲಿ ಪಾಳಿ ಕೆಲಸ ನಿರ್ವಹಿಸುತ್ತಿರುವ ಹೊರಗುತ್ತಿಗೆ ಕೆಲಸಗಾರರಿಗೆ:-

**ಮೊತ್ತ: ರೂಗಳಲ್ಲಿ**

| ಕ್ರ ಸಂ | ಪಡೆಯಲಾದ ವಿವಿಧ ಸೇವೆಗಳು | 2021-22 ರೂ. | 2022-23 ರೂ. | ಷರಾ |
|---|---|---|---|---|
| 1 | ಪಾಳಿ ಇಂಜಿನಿಯರ್ ಗ್ರೇಡ್-1 | 17147.00 | 17657.00 | |
| 2 | ಪಾಳಿ ಇಂಜಿನಿಯರ್ ಗ್ರೇಡ್-2 | 15745.00 | 16255.00 | |
| 3 | ಪಾಳಿ ಮತ್ತು ನಿರ್ವಹಣಾ ಸಹಾಯಕರು | 14470.00 | 14980.00 | |

## 2. ಇತರೆ ಸ್ಥಳಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಹೊರಗುತ್ತಿಗೆ ಕೆಲಸಗಾರರಿಗೆ:-

**ಮೊತ್ತ: ರೂಗಳಲ್ಲಿ**

| ಕ್ರ. ಸಂ | ಪಡೆಯಲಾದ ವಿವಿಧ ಸೇವೆಗಳು | ಬಿಬಿಎಂಪಿ ಮತ್ತು ಇತರೆ ನಗರ ಪಾಲಿಕೆಗಳು Zone-1 | | ಜಿಲ್ಲಾ ಕೇಂದ್ರ ಸ್ಥಾನದ ನಗರಗಳಿಗೆ (Zone-1 ರಲ್ಲಿರುವ ಸ್ಥಳಗಳನ್ನು ಹೊರತು ಪಡಿಸಿ) Zone-2 | | ಇತರೆ ಕಾರ್ಯ ಸ್ಥಳಗಳು Zone-3 | |
|---|---|---|---|---|---|---|---|
| | | 2021-22 ರೂ. | 2022-23 ರೂ. | 2021-22 ರೂ. | 2022-23 ರೂ. | 2021-22 ರೂ. | 2022-23 ರೂ. |
| 1 | ಡಾಟಾ ಎಂಟ್ರಿ ಆಪರೇಟರ್ | 15487.00 | 15997.00 | 15080.00 | 15590.00 | 14728.00 | 15238.00 |
| 2 | ವಾಹನ ಚಾಲಕ | 14167.00 | 14677.00 | 13837.00 | 14347.00 | 13507.00 | 14017.00 |
| 3 | ಕಚೇರಿ ಪರಿಚಾರಕ/ ಗಾರ್ಡನರ್/ ಹೆಲ್ಪರ್ಸ್/ರೂಂಬಾಯ್ಸ್ | 13133.00 | 13643.00 | 12847.00 | 13357.00 | 12561.00 | 13071.00 |

ಕವಿಪ್ರನಿನಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಹೊರಗುತ್ತಿಗೆ ಕೆಲಸಗಾರರಿಗೆ ಮೇಲೆ ತಿಳಿಸಿರುವ ಪರಿಷ್ಕೃತ 2022-23 ರ ಕನಿಷ್ಠ ವೇತನವನ್ನು ಪರಿಗಣಿಸಿ ದಿನಾಂಕ: 01.04.2022 ರಿಂದ ಅನ್ವಯವಾಗುವಂತೆ ಪಾವತಿಸಲು ಮತ್ತು ಹೊಸದಾಗಿ ಟೆಂಡರ್ ಕರೆಯುವಾಗ ಮೇಲೆ ತಿಳಿಸಿರುವ ಕನಿಷ್ಠ ವೇತನವನ್ನು ಪರಿಗಣಿಸುವಂತೆ ತಿಳಿಸಲಾಗಿದೆ.

**ಮಾನ್ಯ ನಿರ್ದೇಶಕರು (ಆ ಮತ್ತು ಮಾ.ಸಂ)**
**ಕವಿಪ್ರನಿನಿ ರವರಿಂದ ಅನುಮೋದಿಸಲ್ಪಟಿದೆ**

14/3/22

**ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ),**
**ಕವಿಪ್ರನಿನಿ**

**ಪ್ರತಿಯನ್ನು ಮಾಹಿತಿಗಾಗಿ:-**

1. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ, ನಿಗಮ ಕಾರ್ಯಾಲಯ, ಬೆಂಗಳೂರು.
4. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ನಿಗಮ ಕಾರ್ಯಾಲಯ, ಬೆಂಗಳೂರು.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ** www.kptcl.karnataka.gov.in **ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ.**

1. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ.
2. ಎಲ್ಲಾ ಉಪಲೆಕ್ಕನಿಯಂತ್ರಣಾಧಿಕಾರಿ, ಪ್ರಸರಣ (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ.
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್, ಕವಿಪ್ರನಿನಿ.
4. ಎಲ್ಲಾ ಲೆಕ್ಕಾಧಿಕಾರಿಗಳು, ಕವಿಪ್ರನಿನಿ.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-**

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು ಕವಿಪ್ರನಿನಿ ನೌಕರರ ಸಂಘ (ನೋಂದಣಿ ಸಂಖ್ಯೆ:659), ಬೆಂಗಳೂರು ಮತ್ತು ನಿರ್ದೇಶಕರು ಕವಿಪ್ರನಿನಿ ಮತ್ತು ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು ಮತ್ತು ನಿರ್ದೇಶಕರು ಕವಿಪ್ರನಿನಿ ಮತ್ತು ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ (ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಪಿಂಚಣಿದಾರರ ಸಂಘ, ಕಾವೇರಿ ಭವನ, ಬೆಂಗಳೂರು.